ಶಿವಮೊಗ್ಗ ಡಿಸ್ಟ್ರಿಕ್ಟ.

ಸ್ಟ 1908ನೆ ಇಸವಿ ಫೆಬ್ರವರಿ ಮಾಹೆ 19ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳ ವರೆಗೂ, ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ಗವರ್ನ್‌ಮೆಂಟಿನಿಂದ ತಲ್ಪಿರುವ 22—12—06ನೆ ಮುಕ್ಕಂ 5540-1—L. F. 495-05—4ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

2. ಜಾತ್ರೆ ನಡೆಯುವ ರಾಮಪುರ ಗ್ರಾಮದ ಸಮೀಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ, ಮೈದಾನಿನಲ್ಲಿ ಪ್ರದರ್ಶನವು ನಡೆಯಲು ಏರ್ಪಡಿಸಿರುತ್ತೆ.

3. ಗಾಡಿ ಎತ್ತು ಜೊತೆ 1ಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಉಳುವ ಎತ್ತು ಜೊತೆ ಒಂದಕ್ಕೆ ಮೊದಲನೆ ಬಹುಮಾನ 20 ರೂಪಾಯಿ, ಎರಡನೆ ಬಹುಮಾನ 10 ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಹಸು ಒಂದಕ್ಕೆ ಒಂದನೆ ಬಹುಮಾನ 15 ರೂಪಾಯಿ, ಅತ್ಯುತ್ತಮವಾದ ಎಮ್ಮೆ ಕ್ಕೆ ಒಂದನೆ ಬಹುಮಾನ 10 ರೂಪಾಯಿ, ಈ ರೀತಿ 7 ಬಹುಮಾನಗಳು ಕೊಡಲ್ಪಡುತ್ತವೆ.

4. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಆಯ್ಕೆಮಾಡಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡ್ಲೆ ಇನಾಂ ಹಂಚಲ್ಪಡುತ್ತದೆ.

5. ಮೇಲ್ಕಂಡ ದ್ರವ್ಯ ರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate) ದೊರಿಯುತ್ತದೆ.

6. ಇನಾಂ ಪಡೆಯಲು ಲಾಯಕ್ಕಿನವಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನ್ಯಾಮತ್ತಿನಲ್ಲಿಡುವದಕ್ಕಾಗಲಿ, ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲಿ ಕಮಿಟಿ ಮೆಂಬರುಗಳು ಅಧಿಕಾರವುಳ್ಳವರಾಗಿರುತ್ತಾರೆ.

7. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಷ್ಟವುಳ್ಳವರು, ಹೊನ್ನಾಳಿ ತಾಲ್ಲೂಕು ಅಮಲ್ದಾರ್ರವರಿಗೆ ಆಗಲಿ, ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೆ ಆಗಲಿ, ಪ್ರದರ್ಶನ ಪುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರೆದು ತಮ್ಮ ಹೆಸರು ಜಾನುವಾರು ತರಕೀಲು ದಾಖಲ್ಮಾಡಿಸಬೇಕು.

8. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲಿ, ಅಥವಾ ಅವುಗಳಿಂದ ಜನಗಳಿಗೆ ಆಗಲಿ, ಯಾವ ಅನಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

9. ಸ್ಥಳದಲ್ಲಿ ಜಮಾಯಿಸಲಹುದಾದ ರಾತ್ರೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತ್ರೀಬಿನ ವಿಷಯಾಡು ಅವುಗಳ ಮಾಲೀಕರೆ ನೋಡಿಕೊಳ್ಳುವದು ಒಳ್ಳೇದು.

10. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡಿಯುತ್ತೆ.

11. 1907ನೆ ಇಸವಿ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನ ಕಾಲದಲ್ಲಿ ಬಹುಮಾನ ಕೊಡಲ್ಪಟ್ಟಿದ್ದರ ತರಕೀಲ್ ಈ ಕೆಳಗೆ ನಮೂದಿಸಿರುತ್ತೆ.

ನಂಬರು	ಪ್ರದರ್ಶನ ಮಾಡಿದ ಮಾಲೀಕನ ಹೆಸರು.			ಬಹುಮಾನದ ತರಕೀಲ್.		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ಮೊಬ್ಲಗು.	ಬಹುಮಾನದ ತರಗತಿ.
					ರೂ.	
1	ರುದ್ರಪ್ಪ ಬಿ ಶಿವಪ್ಪ ...	ನ್ಯಾಮತಿ ...	ಹೊನ್ನಾಳಿ ...	ಉಳುವ ಎತ್ತುಗಳ ಜೊತೆಗೆ.	20	1ನೆ ಬಹುಮಾನ
2	ತಾಮರಾವ್ ಬಿ ಹನುಮಂತರಾವ್.	ಕಿಬ್ಲಿಪುರ ...	ಶಿವಮೊಗ್ಗ ...	ಡಿಟೋ ...	10	2ನೆ ಡಿಟೋ
3	ಹಾಲಪ್ಪ ಬಿ ಹರಗಪ್ಪ...	ಸುಂಕದಕಟ್ಟೆ ...	ಹೊನ್ನಾಳಿ ...	ಬೀಜದ ಹೋರಿ ಒಂದಕ್ಕೆ	15	1ನೆ ಡಿಟೋ
4	ಮಹದೇವಪ್ಪ ಬಿ ಮಲ್ಲಪ್ಪ	ತ್ಯಾವಣಗಿ ...	ಚನ್ನಗಿರಿ ...	ಗಾಡಿ ಎತ್ತಿನ ಜೊತೆ 1ಕ್ಕೆ	10	2ನೆ ಡಿಟೋ

ಎ. ಪೀದಾರಿತದೇಸಗಂ ಏಯ್ಯಂಗಾರ್,
ಫಾರ್ ಪ್ರೆಸಿಡೆಂಟ್.